# ಕುಂಬಾರ, ಬೆಸ್ತ ಸಮಾಜ ಮತ್ತು ಚಿತ್ರಮಂದಿರ ಕಾರ್ಮಿಕ ಕುಟುಂಬಗಳಿಗೆ ದವಸ-ಧಾನ್ಯ ವಿತರಣೆ

**ಚಿತ್ರದುರ್ಗ - ಏ. 17 -** ಭಾರತದ ವಿವಿಧ ಭಾಗಗಳಿಂದ ಹಲವು ಕೆಲಸಗಳನ್ನು ಹುಡುಕಿಕೊಂಡು ಜೀವನೋಪಾಯಕ್ಕೆ ಅನೇಕರು ನಮ್ಮ ರಾಜ್ಯಕ್ಕೆ ಬಂದಿದ್ದಾರೆ ಎಂದು ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ ಹೇಳಿದರು.

ಇಂದು ಮುರುಘಾಮಠದಲ್ಲಿ ಚಿತ್ರಮಂದಿರ ಕಾರ್ಮಿಕರು, ಕುಂಬಾರ ಹಾಗು ಬೆಸ್ತರ ಸಮುದಾಯದ 300 ಕುಟುಂಬಗಳಿಗೆ ಡಾ. ಶಿವಮೂರ್ತಿ ಮುರುಘಾ ಶರಣರೊಂದಿಗೆ ಶಾಸಕರು ದವಸ-ಧಾನ್ಯಗಳನ್ನು ವಿತರಿಸಿ ಮಾತನಾಡುತ್ತ, ಇಡೀ ಜಗತ್ತು ಕೊರೊನಾ ಸಂಕಷ್ಟದಲ್ಲಿ ಸಿಲುಕಿದೆ. ಭಾರತದಲ್ಲಿ 30%ರಷ್ಟು ಬಡವರಿದ್ದಾರೆ. ಅಂತಹವರಿಗೆ ಯಾವ ತೊಂದರೆ ಆಗದಂತೆ ಕೇಂದ್ರ ಹಾಗು ರಾಜ್ಯಸರ್ಕಾರಗಳು ಮತ್ತು ಅನೇಕ ಮಠ-ಮಾನ್ಯಗಳು, ಸಂಘ-ಸಂಸ್ಥೆಗಳು ಮಾನವೀಯತೆಯನ್ನು ಮೆರೆಯುತ್ತಿರುವುದು ಅಭಿಮಾನದ ಸಂಗತಿ. ಬೇರೆ ಬೇರೆ ರಾಜ್ಯಗಳಿಂದ ಬದುಕನ್ನು ಹರಸಿಕೊಂಡು ಬಂದಿರುವ ಅನೇಕರು ಭಾರತದೇಶ ಲಾಕ್‌ಡೌನ್ ಆದಾಗಿನಿಂದ ತೊಂದರೆಗೆ ಸಿಲುಕಿದ್ದಾರೆ. ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ಬಹಳಷ್ಟು ಜನರು ಕಷ್ಟ ಅನುಭವಿಸುತ್ತಿದ್ದಾರೆ. ಲಾಕ್‌ಡೌನ್ ಸಮಸ್ಯೆಯಿಂದ ಒಂದಿಷ್ಟು ತೊಂದರೆ ಆಗಿದ್ದರೂ ಜನರು ಅದನ್ನು ಸಹಿಸಿಕೊಳ್ಳಬೇಕಿದೆ. ರೋಗ ನಮ್ಮಿಂದ ಇನ್ನೊಬ್ಬರಿಗೆ ಹರಡದಂತೆ ನೋಡಿಕೊಳ್ಳಬೇಕಿದೆ. ಜಾತ್ಯಾತೀತ ಮಠವಾದ ಶ್ರೀಮುರುಘಾಮಠವು ಕಷ್ಟದಲ್ಲಿರುವವರನ್ನು ಕೈಹಿಡಿಯುತ್ತಿದೆ.

ಈ ಸಂದರ್ಭದಲ್ಲಿ ಎಲ್ಲ ಸಮುದಾಯದವರಿಗೆ ಪ್ರತಿದಿನ ದವಸ-ಧಾನ್ಯಗಳ ಕಿಟ್‌ಗಳನ್ನು ವಿತರಿಸುವುದರೊಂದಿಗೆ ಮಾನವೀಯತೆಯನ್ನು ತಳೆದಿರುವುದು ನಮಗೆಲ್ಲ ತಿಳಿದ ವಿಚಾರ. ಕೇಂದ್ರ ಮತ್ತು ರಾಜ್ಯಸರ್ಕಾರದ ಪರವಾಗಿ ನಾನು ಶ್ರೀಗಳಿಗೆ ಧನ್ಯವಾದ ತಿಳಿಸುತ್ತೇನೆ.

ಕಾಂಗ್ರೆಸ್ ಮುಖಂಡರಾದ ಮಹಮ್ಮದ್‌ಪಾಷ ಮಾತನಾಡಿ, ಬೇರೆಬೇರೆ ದೇಶಗಳಿಂದ ಪ್ರಾರಂಭವಾದ ಈ ಸೋಂಕು ನಮ್ಮ ದೇಶಕ್ಕು ಹರಡುತ್ತಿದೆ. ಈ ಮಹಾಮಾರಿ ರೋಗದ ಬಗ್ಗೆ ಮಾಧ್ಯಮಗಳು ಸಾಕಷ್ಟು ಜಾಗೃತಿ ಮೂಡಿಸುತ್ತಿರುವುದನ್ನು ಕಾಣುತ್ತಿz್ದÉ್ೀವೆ. ಎಲ್ಲರು ಆರೋಗ್ಯ ಸೇತು ಆ್ಯಪ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಿ. ಸಾಮಾಜಿಕ ಅಂತರ ಕಾಯ್ದುಕೊಳ್ಳಿ. ಮನೆಯಿಂದ ಹೊರಬಂದವರು ಮನೆಗೆ ಹೋದಾಗ ಕೈಗಳನ್ನು ಚೆನ್ನಾಗಿ ತೊಳೆದುಕೊಳ್ಳಿ. ನಿಮ್ಮಿಂದ ನಿಮ್ಮ ಮನೆಯವರಿಗು ಸೋಂಕು ಹರಡುವುದನ್ನು ತಡೆಗಟ್ಟಿ. ಇಂದಿನ ಸಮಸ್ಯೆಗೆ ಮುರುಘಾ ಶರಣರು ಸ್ಪಂದಿಸುತ್ತಿದ್ದಾರೆ. ಎಲ್ಲ ಜನಾಂಗದವರನ್ನು ಕರೆದು ದವಸ-ಧಾನ್ಯಗಳನ್ನು ವಿತರಿಸುತ್ತಿರುವುದು ಶ್ಲಾಘನೀಯ ಎಂದರು.

ಶ್ರೀ ಬಸವಕುಂಬಾರ ಸ್ವಾಮಿಗಳು, ಶ್ರೀ ತಿರುಕಾನಂದ ಸ್ವಾಮಿಗಳು, ವಕೀಲರಾದ ಫಾತ್ಯರಾಜನ್, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಉಮೇಶ್, ಬಿ.ಎಂ.ಜಗದೀಶ್, ಬೆಸ್ತ ಸಮಾಜದ ಮುಖಂಡರಾದ ಶಿವಕುಮಾರ್, ಮೋಹನ್, ಕುಂಬಾರ ಸಮಾಜದ ಯರ್ರಿಸ್ವಾಮಿ, ಮೂರ್ತಿ ಮೊದಲಾದವರಿದ್ದರು.







